ಅದಕ್ಕೆ ಆತನಿಗೆ ಎರಡು ಲಕ್ಷ ಕೊಟ್ಟಿದ್ದಾಳೆ. ಅದಕ್ಕೆ ಹೇಳೋದು ತಾಯಿ ಸತ್ಯ, ತಾಯಿ ತೋರಿಸಿದ ಸತ್ಯ ಅಪ್ಪ ಅಂತ' ಆತ ಗಹಗಹಿಸಿ ನಗಲಾರಂಭಿಸಿದ. ರಾಜಪ್ಪ ಹೀಗೂ ಉಂಟೇ ಅಂತ ಬೆರಗಾಗಿದ್ದನ್ನು ಮನಗಂಡ ಆತ 'ಪಾಂಡವರ ಕಾಲದಲ್ಲಿ ನಿಯೋಗದಲ್ಲಿ ಮಗು ಪಡೆದ ಕಥೆ ಕೇಳಿಲ್ಲವೇ? ಇದೇನು ಹೊಸದಲ್ಲ ಬಿಡು' ಎಂದು ತೆರೆದ ಬಾಯನ್ನು ಮುಚ್ಚಿಸಿದ.

'ಇದೆಲ್ಲ ನಿನಗೆ ಹೇಗೆ ಗೊತ್ತು?' ರಾಜಪ್ಪನ ಪ್ರಶ್ನೆಯನ್ನು ಕಿವಿಯ ಮೇಲೆ ಹಾಕಿಕೊಳ್ಳದಂತೆ ಆತ 'ಈಗ ನೀನು ಹೊರಡು' ಎನ್ನುತ್ತಾ ಉತ್ತರಕ್ಕೂ ಕಾಯದೆ ಅಲ್ಲಿಂದ ಬಿರಬಿರನೇ ಹೋಗಿಯೇಬಿಟ್ಟ. ಅಪರಿಚಿತನ ಮಾತುಗಳ ಗೊಂದಲದಲ್ಲಿ ಬಿದ್ದ ರಾಜಪ್ಪನೂ ಮನೆಯ ಹಾದಿ ಹಿಡಿದ.

ಆಫೀಸ್‌ನಿಂದ ಬಂದವನೇ ರಾಜಪ್ಪ ಪಾರ್ಕ್‌ನ ಕಡೆ ಹೆಜ್ಜೆ ಹಾಕಿದ. ಮೋಹನನ ಮನೆ ಹಾಳು ಕೊಂಪೆಯಂತಾಗಿತ್ತು. ಮನೆಯ ಮುಂದೆ ನೀರು, ರಂಗೋಲಿ ಕಾಣದೆ ಎಷ್ಟು ದಿನಗಳಾಗಿತ್ತೋ? ಮೋಹನನ ಹೆಂಡತಿಯನ್ನು ಹೆಣ್ಣು ಮಕ್ಕಳೇ ತಮ್ಮ ಜೊತೆಗೆ ಕರೆದುಕೊಂಡು ಹೋಗಿದ್ದರು. ಮನೆಯನ್ನು ಮಾರುವ ಬಗ್ಗೆಯೂ ಮಗಳು ರಾಜಪ್ಪನೊಂದಿಗೆ ಫೋನಿನಲ್ಲಿ ಮಾತಾಡಿದ್ದಳು. ಸುಂದರ ಸಂಸಾರ ಎಂಬುವ ಚಿತ್ರಣ ಹೇಗೆ ಕಣ್ಣು ಬಿಟ್ಟು ತೆಗೆಯುವುದರಲ್ಲಿ ಬದಲಾಗಿ ಬಿಡುತ್ತೆ ಅಂತ ಅಲೋಚಿಸುತ್ತಲೇ ಭಾರವಾದ ಹೆಜ್ಜೆಗಳನ್ನು ಹಾಕುತ್ತಾ ಪಾರ್ಕ್‌ನ ಒಳಹೊಕ್ಕ. ತನ್ನ ಬೆಂಚಿನ ಮೇಲೆ ಕೈಚೀಲ ಇಟ್ಟು ತನ್ನ ಜಾಗವೆಂದು ಭದ್ರಪಡಿಸಿಕೊಂಡು ನಂತರ ಸುತ್ತು ಹಾಕಲಾರಂಭಿಸಿದ. ನಾಲ್ಕೈದು ಸುತ್ತು ಹಾಕುತ್ತಲೇ ನಿನ್ನೆ ಸಿಕ್ಕ ಅಪರಿಚಿತನನ್ನು ಹುಡುಕುವ ಪ್ರಯತ್ನ ಮಾಡಿದ. ಯಾರಾತ? ಇಷ್ಟು ವರ್ಷದಿಂದ ಈ ಪಾರ್ಕ್‌ಗೆ ಬಂದಿದ್ದರೂ ಅವನನ್ನು ಒಮ್ಮೆಯೂ ನೋಡಿದ ಜ್ಞಾಪಕವೇ ಇಲ್ಲವಲ್ಲ ಅಂತ ಹಳೆಯ ಪದರುಗಳನ್ನು ಕೆದಕಿದರೂ ಎಲ್ಲಿಯೂ ಆತ ಕಾಣದಾದ.

ರಾಜಪ್ಪ ಬೆಂಚಿನ ಅಂಚಿಗೊರಗಿ ಹಾಗೇ ಕಣ್ಣುಮುಚ್ಚಿದ್ದ 'ಬೇಗನೇ ಬಂದಿರುವಂತಿದೆ' ಅದೇ ಅಪರಿಚಿತ ದನಿ. ಕಣ್ಣುಬಿಟ್ಟ ರಾಜಪ್ಪ 'ಮುಸ್ಸಂಜೆ ಆಗಿದೆ. ನೀವು ಬಂದು ಎಷ್ಟೊತ್ತು ಆಯ್ತು?' ಅಂದ. ಪಕ್ಕಕ್ಕೆ ಸರಿದು ಅವನಿಗೆ ಜಾಗ ಮಾಡಿಕೊಟ್ಟ. ಮತ್ತದೇ ಪ್ರಶಾಂತ ಮುಖಭಾವ. ಅದೇ ಉತ್ಸಾಹ, ತುಂಟತನದ ಕಣ್ಣುಗಳು. 'ನೀವು ನನ್ನನ್ನು ಹುಡುಕುತ್ತ ವಾಕ್ ಮಾಡ್ತ ಇದ್ದದ್ದನ್ನು ನೋಡಿದೆ. ನೀವು ಕುಳಿತ ಮೇಲೆ ಬರೋಣ ಅಂತ ಸುಮ್ಮನಿದ್ದೆ' ಎಂದ.

`'ನಿಮ್ಮ ಮನೆ ಎಲ್ಲಿ? ನಿಮ್ಮ ಹೆಸರೇನು? ನಿನ್ನೆನೂ ಕೇಳಿದೆ, ನೀವು ಹೇಳಲೇ ಇಲ್ಲ' ಆರೋಪಿಸುವವನಂತೆ ರಾಜಪ್ಪ ಹೇಳಿದ. 'ಈ ಹೆಸರಲ್ಲಿ ಏನಿದೆ ಬಿಡಿ. ಅಲ್ಲಿರುವುದು ನಮ್ಮನೆ ಇಲ್ಲಿ ಬಂದೆ ಸುಮ್ಮನೆ' ಅಂತ ಮೇಲ್ಮುಖವಾಗಿ ಕೈತೋರಿಸಿ ಕುಳಿತ. ರಾಜಪ್ಪ ನಿರುತ್ತರನಾದ. 'ಅಂದ ಹಾಗೇ ನಿದ್ದೆ ಮಾಡ್ತಾ ಇದ್ದೀರಾ? ನನಗಂತೂ ಇತ್ತೀಚೆಗೆ ಸರಿಯಾಗಿ ನಿದ್ದೆನೇ ಇಲ್ಲ' ಅವನ ಮಾತಿಗೆ 'ಏಕೆ? ಮನೆಯಲ್ಲಿ ಯಾರೆಲ್ಲ ಇದ್ದೀರಾ? ಹುಷಾರಿಲ್ಲವಾ?' ರಾಜಪ್ಪನ ಮಾತಿಗೆ ಆತ ಮಹತ್ವ ಕೊಡದೆ 'ಈ ಜಗತ್ತನ್ನೇ ಪ್ರೀತಿಸಿ ಅಂತಾರೆ ಅಂತದ್ರಲ್ಲಿ ಕಲ್ಲಲ್ಲಿ ಕಟ್ಟಿದ ಮನೆಗಳನ್ನೆಲ್ಲಾ ನಮ್ಮದು ಅಂತ ಮುದ್ದು ಮಾಡಿ ಸಾಯೋದು ಅಂದ್ರೇನು? ಕಡೆಗೆ ಎಲ್ಲಾ ಬಿಟ್ಟು ಮಣ್ಣಲ್ಲಿ ಮಣ್ಣಾಗೋದು. ಆ ವಿಚಾರ ಬಿಡಿ, ಇಲ್ಲಿ ದಿನಾ ಬೆಳಗ್ಗೆ ನಾಲ್ಕು ಗಂಟೆಗೆ ಜನರ ಗದ್ದಲ ಶುರು. ಬ್ರಾಹ್ಮಿ ಮುಹೂರ್ತ ದಲ್ಲಿ ವಾಕ್ ಮಾಡೋರು ಒಂದು ಕಡೆ ಆದ್ರೆ, ನಿದ್ದೆ ಬರದೆ ಎದ್ದು ಬಂದ ಇಳಿ ವಯಸ್ಸಿನವರ ಗುಂಪೇ ಜಾಸ್ತಿ'.

'ಆರು ಗಂಟೆಯಿಂದ ಗೃಹಿಣಿಯರು, ರಿಟೈರ್ ಆದವರ ಗದ್ದಲ. ಆಮೇಲೆ ಈ ಪಾರ್ಕ್‌ನ ಮೇಲುಸ್ತುವಾರಿಯವರ ಗಲಾಟೆ ಶುರು. ಕಸ ಗುಡಿಸುವುದು, ನೀರು ಹಾಕುವುದು ಇನ್ನು ಸಂಜೆ ಚಿತ್ರಣ ನೀನೇ ನೋಡಿದ್ದೀಯಲ್ಲಾ. ರಾತ್ರಿ ಒಂಬತ್ತೂವರೆ ತನಕ ಇದೇ ಗಿಜಿ ಗಿಜಿ'ಎಂದ.

'ಹಾಗಾದರೆ ನಿನ್ನ ನಿದ್ದೆಗೆ ಭಂಗ ಬಂದಿರುವುದು ಎಲ್ಲಿಂದ?' ರಾಜಪ್ಪನ ಪ್ರಶ್ನೆಗೆ 'ಈಗ ನೋಡು ಸರಿಯಾದ ಪ್ರಶ್ನೆ ಕೇಳಿದೆ. ಅಲ್ಲಿ ಎದುರಿಗೆ ನೋಡ್ತಾ ಇದೆಯಲ್ಲಾ ಆ ಮನೆ ಕಾಣಿಸ್ತಾ?' ಪಾರ್ಕ್‌ಗೆ ಎದುರಿಗೆ ಇದ್ದ ಮನೆಯೊಂದನ್ನು ಆತ ತೋರಿಸಿದ ದಿಕ್ಕಿಗೆ ರಾಜಪ್ಪ ನೋಡಿದ. ಅದು ಈ ಏರಿಯಾಕ್ಕೆ ಬಹಳ ಹಳೆಯ ಮನೆ. ಇತ್ತೀಚೆಗೆ ಮದುವೆಗೆ ಸಿಂಗಾರಗೊಳ್ಳುವ ಮದುಮಗಳಂತೆ ಸಿಂಗರಿಸಿಕೊಳ್ತಾ ಇತ್ತು. ಮನೆಯ ಮುಂದೆ ಬಿದ್ದಿದ್ದ ಸಿಮೆಂಟು, ಮರಳು, ಇಟ್ಟಿಗೆಗಳು ಆ ಮನೆ ರಿನೋವೇಶನ್ ಆಗುತ್ತಿರುವುದಕ್ಕೆ ಸಾಕ್ಷಿಯಾಗಿದ್ದವು. ಮೋಹನನ ಜೊತೆ ಆ ಮನೆ ಮುಂದೆಯೇ ಹಾದು ಹೋಗುವಾಗಲೆಲ್ಲಾ ಪುಟ್ಟ ಮಕ್ಕಳಿಬ್ಬರು ಮರಳಲ್ಲಿ ಆಟವಾಡುತ್ತಿದ್ದದ್ದು ಕಾಣಿಸುತ್ತಿತ್ತು. ಎಪ್ಪತ್ತರ ಪ್ರಾಯದವರೊಬ್ಬರು ಆ ಮನೆಯಿಂದ ದಿನವೂ ವಾಕಿಂಗ್ ಬರುತ್ತಿದ್ದದ್ದನ್ನೂ ಗಮನಿಸಿದ್ದರು. 'ಈ ಮನೆಯವರಿಂದ ನಿನ್ನ ನಿದ್ದೆಗೆ ಕುತ್ತಾಗಿದೆಯಾ?' ಎಂದ.

'ಕುತ್ತು ಅಂತ ಏಕೆಂತಿ. ಅದೊಂತರ ಸುಖದ ಅನುಭೂತಿ' ಒಗಟಿನಂತೆ ಮಾತಾಡಿದ. 'ಹಾಗಂದರೆ?'

'ಆ ಮನೆಯಲ್ಲಿರೋದು ಗಂಡ ಹೆಂಡತಿ, ಇಬ್ಬರು ಮಕ್ಕಳು ಹಾಗೂ ಆ ಮನೆಯ ಯಜಮಾನ. ಯಜಮಾನನ ಹೆಂಡತಿಗೆ ಕ್ಯಾನ್ಸರ್ ಬಂದು ತೀರಿ ಹೋಗಿ ಆರು ವರ್ಷಗಳಾಗಿವೆ. ಮಗನಿಗೆ ಮದುವೆ ಮಾಡಿ ಆ ಯಜಮಾನ ರಿಟೈರ್ಡ್ ಆಗಿದ್ದಾನೆ. ಮಗ ಒಳ್ಳೆ ಬಿಸಿನೆಸ್ ಮ್ಯಾನ್. ಮದುವೆಯಾಗಿ ಹದಿನೈದು ವರ್ಷ ಆಗಿದೆ. ಒಂದು ಗಂಡು, ಒಂದು ಮುದ್ದಾದ ಹೆಣ್ಣು ಮಕ್ಕಳಿವೆ. ಅನುರೂಪವಾದ ಸಂಸಾರ. ಆತನ ಹೆಂಡತಿ ಮನೆ, ಮಕ್ಕಳು ಅಂತ ಸಂಸಾರವನ್ನು ಚೆನ್ನಾಗಿ ನೋಡಿಕೊಂಡು ಹೋಗ್ತಾ ಇದ್ದಾಳೆ' ಅವನ ಮಾತನ್ನು ತುಂಡರಿಸಿ 'ಸಂಸಾರ ಚೆನ್ನಾಗಿ ನಡೆಯುತ್ತಿದೆ ಅಂತಿ, ಪುಟ್ಟ ಸಂಸಾರ ಅಂತಿ. ಇನ್ನಾವ ವಿಷಯ ನಿನ್ನ ನಿದ್ದೆಗೆ ಭಂಗ ತಂದದ್ದು ಅಂತ?' ಒಂಬತ್ತು ತುಂಬಿದರೂ ಹೆರಿಗೆ ಆಗದ ಗರ್ಭಿಣಿಯ ಸಂಕಟದಂತಾಗಿತ್ತು ರಾಜಪ್ಪನ ಪರಿಸ್ಥಿತಿ.

'ಆತುರಗೆಟ್ಟವನಿಗೆ ಬುದ್ಧಿ ಮಂದ ಅಂತಾರೆ, ಸ್ವಲ್ಪ ನಿಧಾನಕ್ಕೆ ಕೇಳು. ಆ ಮನೆಯ ಯಜಮಾನನ ಮಗ ಇದ್ದಾನಲ್ಲಾ ಅವನ ಹೆಸರು ರಾಘವ ಅಂತ. ಮೊದಲೆಲ್ಲಾ ಹನ್ನೊಂದು ಗಂಟೆಗೆ ಕೆಲಸ ಮುಗಿಸಿ ಮನೆಗೆ ಬಂದು ಸೇರುತ್ತಿದ್ದ. ನಾನೂ ನೆಮ್ಮದಿಯಾಗಿ ನಿದ್ದೆ ಮಾಡ್ತಾ ಇದ್ದೆ. ಆದರೆ...' 'ಮತ್ತೇನು ಜಗಳ ಕಾಯ್ತಾನಾ ಹೆಂಡ್ತಿ, ಅಪ್ಪನ ಜೊತೆ? ಅಥವಾ ಕುಡಿದು ಬಂದು ಗಲಾಟೆ ಮಾಡ್ತನೋ?' ರಾಜಪ್ಪನ ಪ್ರಶ್ನೆಗೆ ಆತ 'ಅಂತಹದೇನಿಲ್ಲಾ ಅವನಿಗೆ ನಲವತ್ತರ ಪ್ರಾಯದಲ್ಲಿ ಒಬ್ಬಳ ಮೇಲೆ ಪ್ರೀತಿಯುಂಟಾಗಿದೆ.'

'ಛೆ ಛೆ ಈ ವಯಸ್ಸಿನಲ್ಲಾ?'

'ಯಾಕೆ ಲವ್ ಮಾಡಲು ವಯಸ್ಸಿನ ಮಿತಿಯಿದೆಯೇ?'

'ಅವಳು ಇವನ ಹೆಂಡತಿಗಿಂತ ಚೆನ್ನಾಗಿದ್ದಾಳೋ? ನೀನು ನೋಡಿದ್ದೀಯಾ?' ಇವನ ಪ್ರಶ್ನೆ.

'ಚೆಂದ ಇರಬಹುದು, ನಾನೆಲ್ಲಿ ನೋಡಿದ್ದೀನಿ?'

'ಮತ್ತೆ ನಿನಗೆ ಇದು ತಿಳಿದಿದ್ದಾದರೂ ಹೇಗೆ? ಅದಕ್ಕೂ ನಿನ್ನ ನಿದ್ದೆಗೂ ಏನು ಸಂಬಂಧ?' ಕುತೂಹಲದಿಂದ ಸತ್ತು ಹೋಗುವ ಮನಸ್ಥಿತಿಯಂತಾಗಿತ್ತು ರಾಜಪ್ಪನ ಸ್ಥಿತಿ.

'ರಘು ಒಳ್ಳೆಯ ಹುಡುಗ. ನಾನು ಇಲ್ಲಿಗೆ ಬಂದಾಗಿನಿಂದಲೂ ನೋಡ್ತಾ ಇದ್ದೀನಿ. ನಾಲ್ಕು ಜನರು ಕಷ್ಟ ಅಂದ್ರೆ ಆಗುವ ಜೀವ. ಸ್ವಲ್ಪ ರಾಜಕೀಯದ ವ್ಯಕ್ತಿಗಳೊಂದಿಗೂ ಸಂಪರ್ಕದಲ್ಲಿದ್ದಾನೆ. ದೇವರು, ನಂಬಿಕೆ, ಭಕ್ತಿ ಎಲ್ಲವೂ ಇದೆ. ತನ್ನಮ್ಮನಿಗೆ ಕ್ಯಾನ್ಸರ್ ಅಂತ ಗೊತ್ತಾದಾಗ ಹುಡುಗ ಅನ್ನೋದು ಮರೆತು ಅಮ್ಮನ ಸೇವೆ ಮಾಡಿದ್ದಾನೆ. ಸ್ವಲ್ಪ ಮುಂಗೋಪ, ಹಠ ಇದೆ. ಅಪ್ಪ ಮಗನಿಗೆ ಅಷ್ಟಕಷ್ಟೆ. ಆದ್ರೆ ಅವರ ಮಾತನ್ನು ತೆಗೆದುಹಾಕ್ತಾನೆ ಅಂತ ಅಲ್ಲ. ಹೆಂಡತಿ ಜೊತೆಗೂ ಅನ್ಯೋನ್ಯವಾಗಿದ್ದಾನೆ. ಮಕ್ಕಳಿಗೆ ತಕ್ಕ ಅಪ್ಪ. ಇತ್ತೀಚೆಗೆ ಮೂರು ತಿಂಗಳಿನಿಂದ ಅವನ ಬದುಕಿನಲ್ಲಿ ಒಬ್ಬ ಹೆಂಗಸಿನ ಪ್ರವೇಶವಾಗಿದೆ. ಅವಳು ಇವನಿಗಿಂತ ವಯಸ್ಸಿನಲ್ಲಿ ಹಿರಿಯಳು.'

'ಅದೆಂತದೂ ಇವನಿಗಿಂತ ವಯಸ್ಸಿನಲ್ಲಿ ದೊಡ್ಡವಳನ್ನು ಪ್ರೀತಿಸ್ತಾನಾ? ಕಣ್ಣು ಕುರುಡಾ ಅಂತಾ' ರಾಜಪ್ಪನ ಪ್ರಶ್ನೆ, `ಪ್ರೀತಿ ಅನ್ನುವ ಚಿಲುಮೆ ಹೃದಯದಲ್ಲಿ ಮೊಳಕೆಯೊಡೆಯಲು ವಯಸ್ಸು, ರೂಪ, ಅಂತಸ್ತು ಇದೆಲ್ಲಾ ಮುಖ್ಯ ಕಾರಣ ಆಗಲ್ಲ'. 'ಮತ್ತೆ ಇನ್ನೇನು ಕಾರಣ ಆಗುತ್ತೇ?'

'ಮನಸ್ಸಿನ ಒಂದು ಕಡೆ ಉಗಮವಾಗುವ ಪ್ರೀತಿಯ ಒರತೆ ಇಡೀ ದೇಹವನ್ನು ಆವರಿಸಿಕೊಳ್ಳುತ್ತೆ. ನಿಂತರೆ, ಕುಳಿತರೆ ಬರೀ ಅವಳದೇ ಧ್ಯಾನ, ನೋಡುವ, ಮಾತನಾಡುವ, ಸ್ಪರ್ಶಿಸುವ ಆ ಅನುಭೂತಿಯನ್ನು ಅನುಭವಿಸಿಯೇ ತೀರಬೇಕು.' 'ಅವಳು ಎಲ್ಲಿಯವಳು? ನಿನ್ನ ನಿದ್ದೆಗೇನು ಕನೆಕ್ಷನ್ನು?' ರಾಜಪ್ಪನದು ಮತ್ತದೇ ಕುತೂಹಲ. 'ಮೊದಲಿನಂತೆ ರಾಘವ ಹನ್ನೊಂದಕ್ಕೆ ಮನೆಗೆ ಬರುತ್ತಾನೆ. ಆದರೆ ಮನೆಯೊಳಗೆ ಹೋಗಲ್ಲ. ತನ್ನ ಕಾರನ್ನು ಪಾರ್ಕ್‌ನ ತುದಿಗೆ ನಿಲ್ಲಿಸಿ ಆಕೆಯೊಂದಿಗೆ ಮಾತಾಡ್ತಾನೇ ಇರ್ತಾನೆ. ರಾತ್ರಿ ಒಂದರ ತನಕವೂ ಅವರ ಮಾತುಕತೆ ಸಾಗುತ್ತಲೇ ಇರುತ್ತೆ' ಆತನ ಮಾತಿನ ಅನುನಯಕ್ಕೆ ರಾಜಪ್ಪ ಗಾಳಕ್ಕೆ ಸಿಕ್ಕ ಮೀನಾಗಿದ್ದ.

ಅವನಲ್ಲಿಯೂ ಎಂದೋ ಬತ್ತಿಹೋಗಿದ್ದ ಪ್ರೀತಿಯ ಸೆಲೆ ತೆರೆದುಕೊಳ್ಳಲಾರಂಭಿಸಿತ್ತು. 'ಅವರಿಬ್ಬರು ಅಷ್ಟೊತ್ತು ಏನು ಮಾತಾಡ್ತಾರೆ?'

